ಓ.ಎಸ್. ನಂ. 231 /2017
ಪಿ ಡಬ್ಲ್ಯೂ -1

**<u>ಸಾಕ್ಷಿಯನ್ನು ದಿನಾಂಕ: 01-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀಸವಾಲುಃ 3 ರಿಂದ 5 ನೇ ಪ್ರತಿವಾದಿ ಪರ ಶ್ರೀ ಎ.ಎಂ.ಕೆ. ವಕೀಲರಿಂದ</u>**

**1.** ಪವಾಡಪ್ಪ ನನ್ನ ತಾತ. ಸದರಿ ಪವಾಡಪ್ಪನವರನ್ನು ನಾನು ನೋಡಿರುವುದಿಲ್ಲ. ಸದರಿ ಪಾವಡಪ್ಪನವರಿಗೆ 4 ಜನ ಮಕ್ಕಳು. 2 ನೇ ಪ್ರತಿವಾದಿ ಪವಾಡಪ್ಪನ 4 ನೇ ಮಗ ಎಂದರೆ ಸರಿ. 2 ನೇ ಪ್ರತಿವಾದಿಗೆ 80 ವರ್ಷ ವಯಸ್ಸಾಗಿದ್ದು, ಈಗ ಜೀವಂತವಾಗಿ ಇದ್ದಾರೆ. ಪವಾಡಪ್ಪನವರ ಕುಟುಂಬಕ್ಕೆ ಒಟ್ಟು 4 1/2 ಎಕರೆ ಜಮೀನು ಇತ್ತು. ದಾವಾ ಆಸ್ತಿಗಳ ಸರ್ವೆ ನಂಬರ್ ಹಾಗೂ ವಿಸ್ತೀರ್ಣ ನನ್ನಿಂದ ಹೇಳಲಾಗುವುದಿಲ್ಲ. ಪವಾಡಪ್ಪನ 4 ಜನ ಮಕ್ಕಳು ವಿಭಾಗಗಳನ್ನು ಮಾಡಿಕೊಂಡು ಅವರ ಹಿಸ್ಸೆಗೆ ಬಂದ ಆಸ್ತಿಗಳಲ್ಲಿ ಅವರವರ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪವಾಡಪ್ಪ ಜೀವಂತವಿದ್ದಾಗ ಹಾಗೂ ಅವರು ತೀರಿಕೊಂಡ ನಂತರ ಅವರ 4 ಜನ ಮಕ್ಕಳೆಲ್ಲರೂ ಒಟ್ಟಿಗೆ ವಾಸ ಮಾಡುತ್ತಿದ್ದರು. ನಮ್ಮ ಮನೆಯಲ್ಲಿ ಈಗ ನಾನು ನನ್ನ ಹೆಂಡತಿ ಮಕ್ಕಳು ವಾಸು ಮಾಡುತ್ತಿರುತ್ತೇವೆ. ಅದೇ ರೀತಿ ತಿಮ್ಮಣ್ಣ, ಗೋವಿಂದಪ್ಪ ಮತ್ತು ಹನುಮಂತಯ್ಯನ ಮಕ್ಕಳು ಬೇರೆ ಬೇರೆ ಮನೆಗಳಲ್ಲಿ ಸುಮಾರು 40 ವರ್ಷಗಳಿಂದ ವಾಸ ಮಾಡುತ್ತಿರುತ್ತಾರೆ ಎಂದರೆ ಸರಿ. ಪ್ರತಿವಾದಿ 3 ರಿಂದ 5 ರವರ ಮದುವೆಗಳನ್ನು ಅವರ ತಂದೆ ಹನುಂತಯ್ಯರವರು ಮಾಡಿರುತ್ತಾರೆ ಎಂದರೆ ಸರಿ. ಗೋವಿಂದಪ್ಪನ ಮಕ್ಕಳ ಮದುವೆಗಳನ್ನು ಗೋವಿಂದಪ್ಪ ಮತ್ತು ತಿಮ್ಮಣ್ಣ ರವರ ಮಕ್ಕಳ ಮದುವೆಗಳನ್ನು ತಿಮ್ಮಣ್ಣ ಮಾಡಿರುತ್ತಾರೆ ಎಂದರೆ ಸರಿ. ಹಬ್ಬ-ಹರಿದಿನ ಸಮಾರಂಭಗಳನ್ನು ಹನುಮಂತಯ್ಯ, ಗೋವಿಂದಪ್ಪ ತಿಮ್ಮಣ್ಣರವರ ಮಕ್ಕಳು ಬೇರೆ ಬೇರೆಯಾಗಿ ಮಾಡಿಕೊಳ್ಳುತ್ತಾರೆ ಎಂದರೆ ಸರಿ ಅದೇ ರೀತಿಯಾಗಿ ಅವರೆಲ್ಲರೂ ಜಮೀನುಗಳನ್ನು ಸಹ ಪ್ರತ್ಯೇಕವಾಗಿ ಉಳುಮೆ ಮಾಡಿಕೊಳ್ಳುತ್ತಿರುತ್ತಾರೆ ಎಂದರೆ ಸರಿ. ನಮ್ಮ ತಂದೆ ಯಾವ ಜಮೀನನ್ನು ಉಳುಮೆ ಮಾಡುತ್ತಿದ್ದರೋ ಅದೇ ಜಮೀನನ್ನು ನಾವು ಈಗ ಉಳುಮೆ ಮಾಡುತ್ತಿರುತ್ತೇವೆ. ಆ ರೀತಿ ಉಳುಮೆ ಮಡುತ್ತಿರುವ ಜಮೀನುಗಳ ಸ.ನ. ವಿಸ್ತೀರ್ಣ ಮತ್ತು ಚಕ್ಕುಬಂದಿ ನನ್ನಿಂದ ಹೇಳಲಾಗುವುದಿಲ್ಲ. ನಾವು ಉಳುಮೆ ಮಡುತ್ತಿರುವ ಆಸ್ತಿಗಳ ಖಾತೆ ಪಹಣಿ ನಮಂ ಹೆಸರಿಗೆ ಬಂದಿರುವುದಿಲ್ಲ ಹಾಗೂ ನಾವು ಖಾತೆ ಬದಲಾವಣೆ ಮಾಡುವಂತೆ ಅರ್ಜಿಯನ್ನು ನೀಡಿರುವುದಿಲ್ಲ.

ಪ್ರತಿವಾದಿ 3 ರಿಂದ 5 ರವರು ನಮ್ಮ ಮೇಲೆ ಎ.ಸಿ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿ 3 ರಿಂದ 5 ರವರ ಹೆಸರಿಗೆ ಪ್ರತ್ಯೇಕವಾಗಿ ಖಾತೆ ಪಹಣಿ ಇರುತ್ತದೆ ಎಂದರೆ

ಸರಿ. ತಿಮ್ಮಯ್ಯನ ಮಗ ಹನುಮಂತಯ್ಯ ಹಾಗೂ ತಿಮ್ಮದಾಸಪ್ಪನ ಮಗ ವೆಂಕಟಪ್ಪ ಯಾರು ಎಂದು ನನಗೆ ಗೊತ್ತಿಲ್ಲ. ದಿಃ 30.01.1962 ರಲ್ಲಿ ಪವಾಡಪ್ಪನ ಮಗ ಹನುಮಂತಯ್ಯ, ತಿಮ್ಮಯ್ಯನ ಮಗ ಹನುಮಂತಯ್ಯ ಮತ್ತು ತಿಮ್ಮದಾಸಪ್ಪನ ಮಗ ವೆಂಕಟಪ್ಪನವರು ವಿಭಾಗವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನಾನು ನೋಡಿರುತ್ತೇನೆ, ಓದಿ ತಿಳಿದು ಕೊಂಡಿರುವುದಿಲ್ಲ.

ಭೀಮಣ್ಣ ಯಾರು ಎಂದು ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳಲ್ಲಿ ವಿಭಾಗದ ಪ್ರಕಾರ ದಾವಾ ಆಸ್ತಿಗಳ ಖಾತೆಗಳಾಗಿರುತ್ತವೆ ಎಂದರೆ ಸರಿಯಲ್ಲ. ದಾವಾ 1 ನೇ ಆಸ್ತಿಯು 3 ರಿಂದ 5 ನೇ ಪ್ರತಿವಾದಿಗಳಿಗೆ ವಿಭಾಗದ ಪ್ರಕಾರ ಬಂದಿರುವಂತೆ ಪಹಣಿ ಪತ್ರಿಕೆಗಳಲ್ಲಿ ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವಾ 1 ನೇ ಆಸ್ತಿಯನ್ನು 3 ರಿಂದ 5 ನೇ ಪ್ರತಿವಾದಿಯ ತಂದೆ ದಿಃ 13.11.1945 ರ ಕ್ರಯಪತ್ರದ ಮೂಲಕ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸದರಿ ಸ.ನ. ನಲ್ಲಿ ಇವತ್ತಿಗೂ ನಾವೇಲ್ಲಾ ಅನುಭವದಲ್ಲಿ ಇರುತ್ತಿರುತ್ತೇವೆ. ಸದರಿ ಆಸ್ತಿಯಲ್ಲಿ ನಾವು ಅನುಭವದಲ್ಲಿ ಇರುವ ಬಗ್ಗೆ ದಾಖಲೆಗಳು ಇರುವುದಿಲ್ಲ. 2 ನೇ ಪ್ರತಿವಾದಿಯು ಅವರ ಹಿಸ್ಸೆಗೆ ಬಂದ ಆಸ್ತಿಯ ಪೈಕಿ 1 ಎಕರೆ ಆಸ್ತಿಯನ್ನು ದಿಃ 22.12.1980 ರಂದು ಹನುಮಂತಯ್ಯನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಖಾತೆಯು ಹನುಮಂತಯ್ಯನವರಿಗೆ ಬಂದಿದ್ದು , ಅವರು ಮರಣ ನಂತರ ಅವರ ಮಕ್ಕಳ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. 3 ರಿಂದ 5 ನೇ ಪ್ರತಿವಾದಿಗಳ ಹೆಸರಿಗೆ ಆಗಿರುವ ಖಾತೆಯನ್ನು ನಾನು ಪ್ರಶ್ನಿಸಿರುವುದಿಲ್ಲ. ಹನುಮಂತಯ್ಯನವರ ಹೆಸರಿಗೆ ಬಂದಿರುವ ಆಸ್ತಿಗಳಲ್ಲಿ ನಮ್ಮನ್ನು ಜಂಟಿಯಾಗಿ ಸೇರಿಸುವಂತೆ ನಾವು ಅರ್ಜಿಯನ್ನು ನೀಡಿರುವುದಿಲ್ಲ. ನಮ್ಮ ಹಾಗೂ ಪ್ರತಿವಾದಿ 3 ರಿಂದ 5 ರವರ ನಡುವೆ ಸುಮಾರು 5 ವರ್ಷಗಳಿಂದ ಮಾತುಕತೆ ಇರುವುದಿಲ್ಲ, ಆ ಮೊದಲು ಚೆನ್ನಾಗಿ ಇದ್ದೇವು.

ದಾವಾ ಆಸ್ತಿಗಳಲ್ಲಿ ಪ್ರತಿವಾದಿ 3 ರಿಂದ 5 ರವರು ಜಂಟಿ ಸ್ವಾಧೀನದಲ್ಲಿ ಇರುತಾತರೆ ಎಂದರೆ ನನಗೆ ಗೊತ್ತಿಲ್ಲ. ದಾವಾ 1 ನೇ ಆಸ್ತಿಯನ್ನು ಕ್ರಯಕ್ಕೆ ಪಡೆಯುವ ಕಾಲಕ್ಕೆ ನಾನು ಜನಿಸಿರುವುದಿಲ್ಲ ಎಂದರೆ ಸರಿ. ದಾವಾ 1 ನೇ ಆಸ್ತಿಯನ್ನು ಹನುಮಂತಯ್ಯನವರು ಅವರ ಸ್ವಂತ ಸಂಪಾದನೆಯಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ, ಒಟ್ಟು ಕುಟುಂಬದ ಪರವಾಗಿ ಕ್ರಯಕ್ಕೆ ಪಡೆದಿರುವ ಬಗ್ಗೆ

ನನ್ನ ತಂದೆ ನನಗೆ ಹೇಳಿರುತ್ತಾರೆ. ನನ್ನ ತಂದೆ ಸುಮಾರು 8 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಹನುಮಂತಯ್ಯನವರು ಸುಮಾರು 10 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಹನುಮಂತಯ್ಯನವರು ದಾವಾ ಆಸ್ತಿಗಳ ಪೈಕಿ ಯಾವ ಆಸ್ತಿಗಳನ್ನು ಕ್ರಯಕ್ಕೆ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಹನುಮಂತಯ್ಯನವರು ಕ್ರಯಕ್ಕೆ ಪಡೆಯುವ ಸಮಯದಲ್ಲಿ ನಾನಾಗಲೀ ನನ್ನ ತಂದೆಯವರು ಹಣವನ್ನು ನೀಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳ ಖಾತೆಗಳು ದಾವಾ 1 ರಿಂದ 4 ಹಾಗೂ 6 ಮತ್ತು 7 ನೇ ಆಸ್ತಿಗಳ ಖಾತೆಗಳು ಹನುಮಂತಯ್ಯನವರ ಹೆಸರಿನಲ್ಲಿದ್ದು, ಅವರು ಮೃತಪಟ್ಟ ನಂತರ ಸದರಿ ಆಸ್ತಿಗಳ ಖಾತೆಗಳು ಅವರ ಹೆಂಡತಿ ಮಕ್ಕಳ ಹೆಸರಿಗೆ ಎಂ.ಆರ್. ಸಂ. 4/1995-96 ರಂತೆ ಬಂದಿರುತ್ತದೆ ಎಂದರೆ ಸರಿ. ನಮಗೆ ಬಂದಿರುವ ಆಸ್ತಿಗಳನ್ನು ನಾವು ಪ್ರತ್ಯೇಕವಾಗಿ ಅನುಭವಿಸುತ್ತಿರುತ್ತೇವೆ ಎಂದರೆ ಸರಿ, ಪ್ರತಿವಾದಿಗಳು ನಮ್ಮ ಮೇಲೆ ಗಲಾಟೆಗೆ ಬಂದಿರುತ್ತಾರೆ. ನಾವು ಪ್ರತಿವಾದಿ 3 ರಿಂದ 5 ರವರು ಅನುಭವಕ್ಕೆ ತೊಂದರೆ ಪಡಿಸುತ್ತಿರುತ್ತೇವೆ ಎಂದರೆ ಸರಿಯಲ್ಲ. ಪವಾಡಪ್ಪನ 4 ಜನ ಮಕ್ಕಳು ವಿಭಾಗ ಮಾಡಿಕೊಂಡಿರುವ ಕಾರಣ ಈಗ ವಿಭಾಗ ಮಾಡಲು ಬೇರೆ ಆಸ್ತಿಗಳು ಉಳಿದಿರುವುದಿಲ್ಲ ಎಂದರೆ, ಎಲ್ಲಾ ಆಸ್ತಿಗಳು ಜಂಟಿಯಾಗಿ ಇರುತ್ತವೆ. ಪ್ರತಿವಾದಿ 3 ರಿಂದ 5 ರವರಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ದಾವೆಯನ್ನು ಹಾಗೂ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ ನುಡಿಯುತ್ತಿದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

6 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಾಕಷ್ಟು ಕಾಲವಾಕಾಶ ನೀಡಿದ್ದರೂ ಪಾಟೀ ಸವಾಲು ಮಾಡಿರುವುದಿಲ್ಲ ಹಾಗೂ 6 ನೇ ಪ್ರತಿವಾದಿಯು ಪ್ರತಿವಾದ ಪತ್ರವನ್ನು ಸಲ್ಲಿಸಿರುವುದಿಲ್ಲ. ಆದ ಕಾರಣ ಪಾರ್ಥನೆಯನ್ನು ತಿರಸ್ಕರಿಸಿ 6 ನೇ ಪ್ರತಿವಾದಿ ಪರವಾಗಿ PW-1 ರವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**